**ನ್ಯಾಜ ಹೋರಾಟಗಾರರ ವೇದಿಕೆ**
**ಬೆಂಗಳೂರು. nhvedike@gmail.com**
**8050360054** ,9591078780.

---

**ಗೆ,**

ಸರ್ಕಲ್ ಇನ್ಸ್‌ಪೆಕ್ಟರ್ ಆಫ್ ಪೊಲೀಸ್,
ಕಬ್ಬನ್ ಪಾರ್ಕ್ ಪೊಲೀಸ್ ಸ್ಟೇಷನ್,
ಕಸ್ತೂರ್ಬಾ ರಸ್ತೆ,
ಬೆಂಗಳೂರು

**ಮಾನ್ಯರೆ,**

**ವಿಷಯ:** ಚಿನ್ನಸ್ವಾಮಿ ಸ್ಟೇಡಿಯಂ ನಲ್ಲಿ ದಿನಾಂಕ 04/06/25 ರಂದು ನೂಕು ನುಗ್ಗಲು ಮತ್ತು ಕಾಲುತುಳಿತದಿಂದ 11 ಜನ ವಿರಾಟ್ ಕೊಹ್ಲಿ ಅಭಿಮಾನಿಗಳು ದುರ್ಮರಣ ಹೊಂದಲು ಕಾರಣರಾದ ಆರ್ ಸಿ ಬಿ ತಂಡದ ಕ್ರಿಕೆಟಿಗ ವಿರಾಟ್ ಕೊಹ್ಲಿ ವಿರುದ್ಧ ದೂರು.

ದೇಶದ ವಿವಿಧ ರಾಜ್ಯಗಳ ಐಪಿಎಲ್ ತಂಡವು ಕ್ರಿಕೆಟ್ ಪಂದ್ಯಾವಳಿಯನ್ನು ನಡೆಸಿದ್ದು ಇದರಲ್ಲಿ ಬೆಂಗಳೂರಿನ ಆರ್‌ಸಿಬಿ ತಂಡವು ವಿಜೇತರಾದ ಹಿನ್ನೆಲೆಯಲ್ಲಿ ದಿನಾಂಕ: 04/06/25 ರಂದು ಬೆಂಗಳೂರಿನ ಚಿನ್ನಸ್ವಾಮಿಸ್ಟೇಡಿಯಂನಲ್ಲಿ ವಿಜಯೋತ್ಸವ ಆಚರಣೆ ಸಂದರ್ಭದಲ್ಲಿ 11 ಜನ ಕಾಲ್ತುಳಿತದಿಂದ ಮರಣ ಹೊಂದಿದ್ದು, ಇದಕ್ಕೆ ಸಂಬಂಧಿಸಿದಂತೆ ತಮ್ಮ ಠಾಣೆಯಲ್ಲಿ ಮತ್ತು ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಈಗಾಗಲೇ ಹಲವು ವ್ಯಕ್ತಿಗಳ ವಿರುದ್ಧ ದೂರುಗಳು ದಾಖಲಾಗಿವೆ.

ಐಪಿಎಲ್ ಎಂಬುದು ಒಂದು ಕ್ರೀಡೆಯಲ್ಲ. ಅದು ಕ್ರಿಕೆಟ್ ಆಟದ ಕಲುಷಿತಗೊಂಡ ಜೂಜಾಟದ ಒಂದು ರೂಪ ಮತ್ತು ಮಾದರಿ.. ಅದರಲ್ಲಿ ಕೆಲವು ಖಾಸಗಿ ಸಂಸ್ಥೆಗಳು ಮನುಷ್ಯರನ್ನು (ಆಟಗಾರರನ್ನು)ವಸ್ತು ರೂಪದ ಹರಾಜಿನಂತೆ ಕೊಂಡು, ಅವರನ್ನು ಖಾಸಗಿ ನೌಕರರಂತೆ ನಡೆಸಿಕೊಳ್ಳುತ್ತಾ, ಜನರಿಗೆ ಮನರಂಜನೆ ನೀಡಿ ಹಣ ಮಾಡುವ ಒಂದು ದಂಧೆ. ಅದಲ್ಲಿ ಚಿಯರ್ ಗರ್ಲ್ಸ್ ಎಂಬ

ಕ್ಯಾಬರೆ ರೀತಿಯ ನೃತ್ಯವೂ ಇರುತ್ತದೆ. ಜಗತ್ತಿನ ಯಾವ ಕ್ರೀಡೆಯಲ್ಲಿಯೂ ಈ ರೀತಿಯ ಮನರಂಜನೆ ಇರುವುದಿಲ್ಲ.

ಇಂತಹ ಜೂಜಾಟದಲ್ಲಿ ಭಾಗಿಯಾಗಿ ಜನರನ್ನು ಪ್ರಚೋದಿಸಿ ಒಂದು ನಿರ್ದಿಷ್ಟ ಜಾಗದಲ್ಲಿ ಎಲ್ಲರೂ ಗುಂಪಾಗಿ ಸೇರಿ ಈ ದುರ್ಘಟನೆಗೆ ಕಾರಣರಾದವರಲ್ಲಿ ಬೆಂಗಳೂರು ಆರ್‌ಸಿಬಿ ತಂಡದ ವಿರಾಟ್ ಕೊಹ್ಲಿ ಅವರು ಅತ್ಯಂತ ಪ್ರಮುಖರು. ಆದ್ದರಿಂದ ತಾವು ದಯವಿಟ್ಟು ಈ ದುರ್ಘಟನೆ ಪ್ರಕರಣದ ಎಫ್‌ಐಆರ್ ನಲ್ಲಿ ವಿರಾಟ್ ಕೊಹ್ಲಿ ಮತ್ತು ತಂಡದ ಸಹ ಸದಸ್ಯರನ್ನು ಆರೋಪಿಗಳನ್ನಾಗಿ ಮಾಡಿ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸುತ್ತೇವೆ.

ಬೆಂಗಳೂರಿನ ಮತ್ತು ರಾಜ್ಯದ ವಿವಿಧ ಕಡೆಗಳಿಂದ ಬಂದ ವಿರಾಟ್ ಕೊಹ್ಲಿ ಅಭಿಮಾನಿಗಳೇ ಹೆಚ್ಚಾಗಿದ್ದು ವಿರಾಟ್ ಕೊಹ್ಲಿಯನ್ನು ನೋಡಿ ಕಣ್ತುಂಬಿಸಿಕೊಳ್ಳಬೇಕೆಂಬ ಹುಚ್ಚು ಹಂಬಲದಿಂದ ಬಂದವರು ಕಾಲ್ತುಳಿತದಲ್ಲಿ ಮರಣ ಹೊಂದಿದ್ದಾರೆ. ಇವರನ್ನು ನಿಯಂತ್ರಿಸುವಲ್ಲಿ ಪೊಲೀಸರು ತಮ್ಮ ಕರ್ತವ್ಯ ಲೋಪವನ್ನು ಮಾಡಿರುತ್ತಾರೆ.

ದಿನಾಂಕ: 03/06/25 ರಂದು ಅಹಮದಾಬಾದಿನಲ್ಲಿ ನಡೆದ ಪಂದ್ಯದಲ್ಲಿ ಗೆದ್ದ ವಿಜಯೋತ್ಸವ ರಾತ್ರಿ ಎಲ್ಲ ಬೆಂಗಳೂರಿನಲ್ಲಿ ನಡೆದಿದ್ದು ತಮ್ಮ ಗಮನದಲ್ಲಿದೆ. ಇಂತಹ ಹುಚ್ಚು ಅಭಿಮಾನದ ಉದ್ವೇಗದ ವಾತಾವರಣದಲ್ಲಿ ತಕ್ಷಣ ಇಷ್ಟೊಂದು ಸಂಖ್ಯೆಯ ಅಭಿಮಾನಿಗಳನ್ನು ಕರೆದು ವಿಜಯೋತ್ಸವ ಆಚರಿಸುವ ಅವಶ್ಯಕತೆ ಇರಲಿಲ್ಲ. ಆದರೆ ಕ್ರಿಕೆಟಿಗ ವಿರಾಟ್ ಕೊಹ್ಲಿ ತನ್ನ ಸ್ವಾರ್ಥಕ್ಕಾಗಿ ವಿದೇಶ ಪ್ರವಾಸದ ಸಲುವಾಗಿ ಪಂದ್ಯಾವಳಿಯನ್ನು ಗೆದ್ದ ಮರು ದಿನವೇ ಬೆಂಗಳೂರಿನಲ್ಲಿ ಕಾರ್ಯಕ್ರಮ ಆಯೋಜಿಸುವಂತೆ ಕ್ರಿಕೆಟ್ ಮಂಡಳಿ, ಆರ್ ಸಿ ಬಿ ಮ್ಯಾನೇಜ್ಮೆಂಟ್, ಇವೆಂಟ್ ಮ್ಯಾನೇಜ್ಮೆಂಟ್ ಮೇಲೆ ಒತ್ತಡ ಹೇರಿರುವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ.

ಕಾಲ್ತುಳಿತದಿಂದ ದುರ್ಮರಣ ಹೊಂದಿದ ತಕ್ಷಣ ಅವರು ಬೆಂಗಳೂರನ್ನು ಬಿಟ್ಟು ಲಂಡನ್ ಗೆ ಪ್ರಯಾಣ ಬೆಳೆಸಿರುವುದು ಇದಕ್ಕೆ ಪೂರಕವಾದ ಸಾಕ್ಷಿಯಾಗಿರುತ್ತದೆ. ವಿರಾಟ್ ಕೊಹ್ಲಿ ಅವರು ಸಾಮಾಜಿಕ ಜಾಲತಾಣದಲ್ಲಿ ತಮ್ಮ ಅಪಾರ ಬಂಧುಗಳಿಗೆ ಈ

ಸಮಾರಂಭದಲ್ಲಿ ಭಾಗವಹಿಸಲು ಪ್ರಚೋದನೆ ನೀಡಿದ್ದರು ಅವರು ಯಾವುದೇ ಸಾರ್ವಜನಿಕ ಸುರಕ್ಷತೆ ಬಗ್ಗೆ ಎಚ್ಚರಿಕೆ ನೀಡಿರಲಿಲ್ಲ.

ಡಿಎನ್‌ಎ ಎಂಟರ್ಟೈನ್ಮೆಂಟ್ ಆರ್.ಸಿ.ಬಿ. ತಂಡದ ವ್ಯವಸ್ಥೆ ಸಮರ್ಪಕ ಅನುಮತಿ ಕ್ರೌಡ್ ಮ್ಯಾನೇಜ್ಮೆಂಟ್, 2020 ನಿರ್ವಹಣಾ ಯೋಜನೆ ಅಥವಾ ಪರಿಯಾಯ ಪ್ರವೇಶ ವ್ಯವಸ್ಥೆ ಇಲ್ಲದೆ ಜನರ ನೂಕು ನುಗ್ಗಲಿಗೆ ಕಾರಣರಾದರು ಪ್ರಮುಖ ಅಭಿಯಾನದ ಮುಖವಾಡ ಆಗಿದ್ದ ವಿರಾಟ್ ಕೊಯ್ಲಿ ಅವರು ಈ ದುರ್ಘಟನೆ ನೈತಿಕ ಮತ್ತು ಕಾನೂನು ಬದ್ದ ಹೊಣೆಗಾರರಾಗಿದ್ದಾರೆ ಏಕೆಂದರೆ ಅವರು ತಮ್ಮ ಪ್ರಭಾವದಿಂದಲೇ ಸಹಸ್ರಾರು ಜನರನ್ನು ಆಕರ್ಷಿಸಿದ್ದರು.

ಸಾಂಕ್ರಾಮಿಕ ರೋಗ ಕರೋನ ಈಗಾಗಲೇ ರಾಜ್ಯವನ್ನು ಪ್ರವೇಶಿಸಿದ್ದು ಸಮೂಹ ಜನಜಮಾವಣೆಯಿಂದ ಸಾರ್ವಜನಿಕ ಆರೋಗ್ಯ ಕ್ರಮಗಳಿಗೆ ವಿರುದ್ದವಾಗಿ ವಿಜಯೋತ್ಸವ ನಡೆದಿದೆ. ಆದುದರಿಂದ ಐಪಿಸಿ 336,337,338,304A,268,283 ಇತರ ಜೀವ ಶಾರೀರಿಕ ಸುರಕ್ಷತೆಗೆ ಅಪಾಯ ಉಂಟು ಮಾಡುವ ಕ್ರಿಯೆ 120 ಬಿ ಅಪರಾಧ ಸಂಚು, Karnataka public safety measures enforcement act 2017,ನಿರ್ವಹಣಾ ಅಧಿಕಾರಿಗಳಿಗೆ ಅಡ್ಡಿ ಮಾಡುವುದು ಸೆಕ್ಷನ್ 51, ಘಟನೆಯ ಹೊಣೆಗಾರಿಕೆ ಹೊಂದಿದ ಸಂಸ್ಥೆಗಳ ವಿರುದ್ದ ಸೆಕ್ಷನ್ 55 ಮತ್ತು endemic disease act 1897 ಕೂಡ ಅನ್ವಯವಾಗುತ್ತದೆ.

ವಿರಾಟ್ ಕೊಹ್ಲಿ ಸಹಮಾಲೀಕತ್ವದ one 8 ರೆಸ್ಟೋರೆಂಟ್ ನಿಮ್ಮ ಠಾಣೆಯ ವ್ಯಾಪ್ತಿಯಲ್ಲಿದ್ದು ಈ ರೆಸ್ಟೋರೆಂಟ್ ಕೂಡ ಹಲವಾರು ನಿಯಮಗಳನ್ನು ಉಲ್ಲಂಘನೆ ಮಾಡಿರುವ ಬಗ್ಗೆ ತಮ್ಮ ಠಾಣೆಯಲ್ಲಿ ದೂರುಗಳು ದಾಖಲಾಗಿದೆ.

ಬಹಳ ಮುಖ್ಯವಾಗಿ ಅಗ್ನಿಶಾಮಕದಳದ ಯಾವುದೇ ಮುಂಜಾಗ್ರತೆಯನ್ನು ತೆಗೆದುಕೊಳ್ಳದೆ ರೆಸ್ಟೋರೆಂಟ್ ನಡೆಸಲು ಅನುಮತಿ ನೀಡಿದ ಆಯುಕ್ತರು ಬೆಂಗಳೂರು ಮಹಾನಗರ ಪಾಲಿಕೆ ಇವರಿಗೂ ಮತ್ತು ಅಗ್ನಿಶಾಮಕ ದಳದ ಡೈರೆಕ್ಟರ್ ಜನರಲ್ ಎಂಡ್ ಇನ್ಸ್ಪೆಕ್ಟರ್ ಜನರಲ್ ಆಫ್ ಪೋಲಿಸ್ ಇವರಿಗೆ ದಿನಾಂಕ: 17-02-

2025 ದಂದು ದೂರನ್ನು ಸಹ ದಾಖಲಿಸಿರುತ್ತೇನೆ. ಆದರೆ ಈವರೆಗೂ ಸರಿಯಾದ ಅಗ್ನಿಅವಗಡಗಳನ್ನು ನಿಯಂತ್ರಿಸಲು ಮುಂಜಾಗ್ರತೆ ಕ್ರಮವನ್ನು ವಹಿಸದಿರುವುದರಿಂದ ಮುಂದಿನ ದಿನಗಳಲ್ಲಿ ಅಗ್ನಿ ಅವಘಡ ಆಗಿ ರೆಸ್ಟೋರೆಂಟ್ ಗೆ ಬರುವ ಗ್ರಾಹಕರು ಸಾವನ್ನಪ್ಪುವ ಮೊದಲು ವಿರಾಟ್ ಕೊಹ್ಲಿ ಸಹ ಮಾಲೀಕತ್ವದ ಸದರಿ ರೆಸ್ಟೋರೆಂಟ್ ಅನ್ನು ತಕ್ಷಣ ಮುಚ್ಚಿಸಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇನೆ.

ಪ್ರಖ್ಯಾತಿ ಹೊಂದಿರುವ ವಿರಾಟ್ ಕೊಹ್ಲಿ ಅವರು ಕಾನೂನುಗಳನ್ನು ಉಲ್ಲಂಘಿಸುವುದು ಸಹಜವಾದ ಕ್ರಿಯೆ ಎಂದು ತಿಳಿದುಕೊಂಡಿದ್ದಾರೆ. ಇದಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಶಾಂತಲಾ ನಗರದ ವಾರ್ಡ್ ಆರೋಗ್ಯ ಅಧಿಕಾರಿಗಳು ಮತ್ತು ಅಗ್ನಿಶಾಮಕದಳದವರು ಶಾಮೀಲಾಗಿರುವುದರಿಂದ ಈ ರೆಸ್ಟೋರೆಂಟ್ ನಡೆಯುತ್ತಿದೆ.

ವಿರಾಟ್ ಕೊಹ್ಲಿ ಪ್ರಖ್ಯಾತಿಯ ಉತ್ತುಂಗದಲ್ಲಿದ್ದ ಮಾತ್ರಕ್ಕೆ ಅವರು ಏನು ಮಾಡಿದರು ನಡೆಯುತ್ತದೆ ಎಂಬ ಭಾವನೆಯುಳ್ಳ ವಿರಾಟ್ ಕೊಹ್ಲಿ ತನ್ನನ್ನು ನೋಡಲು ಬಂದ ಅಭಿಮಾನಿಗಳ ದುರ್ಮರಣ ಹೊಂದಿದ್ದ ಕುಟುಂಬಗಳ ಪೋಷಕರನ್ನು ಭೇಟಿಯಾಗಿ ಸಾಂತ್ವಾನ ಹೇಳುವುದನ್ನು ಬಿಟ್ಟು ತಕ್ಷಣ ಬೆಂಗಳೂರನ್ನು ತೊರೆದಿರುವುದು ಹಲವಾರು ಊಹೆಗಳಿಗೂ ಕಾರಣವಾಗುತ್ತಿದೆ.

ಹೈದರಾಬಾದ್ ನಲ್ಲಿ ಈ ಹಿಂದೆ ಸಿನಿಮಾ ನೋಡಲು ಬಂದು ನೂಕುನುಗ್ಗಲಿಂದ ಕಾಲ್ತುಳಿತದಲ್ಲಿ ದುರ್ಮರಣ ಹೊಂದಿದ ಘಟನೆ ನಡೆದಿದ್ದು ಈ ಹಿನ್ನಲೆಯಲ್ಲಿ ತಕ್ಷಣ ಸಿನಿಮಾ ನಟ ಅಲ್ಲು ಅರ್ಜುನ್ ನನ್ನು ಬಂಧಿಸಿದ ಘಟನೆ ನಡೆದಿದೆ. ಈ ವಿಷಯವು ತಮ್ಮ ಗಮನದಲ್ಲಿದೆ ಎಂದು ಭಾವಿಸುತ್ತೇನೆ.

ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಕಾಲ್ತುಳಿತದ ದುರ್ಘಟನೆಗೆ ಪ್ರಮುಖ ಕೇಂದ್ರ ಬಿಂದು ವಿರಾಟ್ ಕೊಹ್ಲಿ ಆಗಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಆದುದರಿಂದ ತಾವು ವಿರಾಟ್ ಕೊಹ್ಲಿಯ ಹುಚ್ಚು ಅಭಿಮಾನಿಗಳು 11 ಜನ ಯುವಕ, ಯುವತಿಯರು ದುರ್ಮರಣಕ್ಕೆ ಕಾರಣಕರ್ತರಾದ ವಿರಾಟ್ ಕೊಹ್ಲಿಯ ವಿರುದ್ಧ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ತನಿಖೆ ನಡೆಸಿ

ನ್ಯಾಜ ಹೋರಾಟಗಾರರ ವೇದಿಕೆ
ಬೆಂಗಳೂರು. nhvedike@gmail.com
8050360054 ,9591078780.

ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮಗಳನ್ನು ಜರುಗಿಸಬೇಕೆಂದು ಈ ಮೂಲಕ ತಮ್ಮಲ್ಲಿ ಪ್ರಾರ್ಥನೆ.

ಸದರಿ ದೂರನ್ನು ತಾವು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ತಕ್ಷಣ ನನಗೆ ನೀಡಬೇಕೆಂದು ಈ ಮೂಲಕ ಕೋರಿಕೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

ಹೆಚ್ ಎಂ ವೆಂಕಟೇಶ್
ಹಿರಿಯ ಸಾಮಾಜಿಕ ಹೋರಾಟಗಾರರು
ಹಾರೋಗೊಳಿಗೆ,
ತೀರ್ಥಹಳ್ಳಿ ತಾಲೂಕ್,
ಶಿವಮೊಗ್ಗ ಜಿಲ್ಲೆ.

**ದಿನಾಂಕ:** 06/06/25

**ಸ್ಥಳ** : ಬೆಂಗಳೂರು

LOKESH. B. S.
#41, 4th Cross, 1st Main,
Kottigepalya, Bangalore-560091
Mob-9591078780.